ಎಲ್ಲಿ ಅಗೆದರೂ ತೈಲ ಸಿಗುವಂಥ ನೆಲ ಸೌದಿ ಅರೇಬಿಯಾದ್ದು. ಒಡಲಲ್ಲಿ ಅಗಾಧ ತೈಲವನ್ನು ಹುದುಗಿಸಿಟ್ಟುಕೊಂಡಿರುವ ಶ್ರೀಮಂತ ದೇಶದ ಕನಸುಗಳು ಕೂಡ ದುಬಾರಿಯೇ. ಆದರೆ ಆ ಕನಸುಗಳನ್ನು ನನಸು ಮಾಡಿಕೊಳ್ಳುವ ಅಲ್ಲಿನವರ ಇಚ್ಛಾಶಕ್ತಿ ಎಂಥವರನ್ನೂ ವಿಸ್ಮಯಗೊಳಿಸಬಲ್ಲದು.

ರಿಯಾದ್‌ನಲ್ಲಿ ಸೌದಿ ಅರೇಬಿಯಾದ ಅತಿ ಎತ್ತರದ ಕಟ್ಟಡ 'ಕಿಂಗ್‌ಡಂ ಸೆಂಟರ್'ಗೆ ಭೇಟಿ ನೀಡಿದೆವು. ಮರಳುಗಾಡಿನ ಸುಡುಭೂಮಿಯ ನಡುವೆ ಪುಟ್ಟ ಹಳ್ಳಿಯಂಥ ಜಾಗ ಇದೀಗ ಗಗನಚುಂಬಿ ಕಟ್ಟಡಗಳಿಂದ ಆವರಿಸಿಕೊಂಡು ಆಧುನಿಕವಾಗಿ ರೂಪಾಂತರಗೊಂಡಿರುವುದು ನೋಡಿದರೆ ಪವಾಡವೆನಿಸುತ್ತದೆ.

ಸೌದಿಯ ಇತಿಹಾಸದ ತುಣುಕಿನಂತೆ ಕಾಣುವ, ರಿಯಾದ್‌ನಲ್ಲಿನ 'ದಿರಿಯಾ' ಆಕರ್ಷಿತವಾಗುವುದು ಮಣ್ಣು ಇಟ್ಟಿಗೆಗಳಿಂದ ಕಟ್ಟಲಾದ ಕಟ್ಟಡಗಳಿಂದ. ಮರಳಿನ ನಡುವೆ ಎದ್ದುನಿಂತ ಈ ಕಟ್ಟಡ ನೋಡಲು ದಿನವೂ ನೂರಾರು ಮಂದಿ ಬರುತ್ತಾರಂತೆ. ಮರಳುಗಾಡಿನಲ್ಲಿ ಸುಂದರ ಶಿಲ್ಪದಂತೆ ಕಾಣುವ, ಹಾಗೆಯೇ ವಿಶ್ವ ಪಾರಂಪರಿಕ ತಾಣವೆಂದು ಗುರುತಿಸಿಕೊಂಡ ಅಲುಲಾದ ಹೆಗ್ರಾ, ಸುಡುಬಿಸಿಲಿನಲ್ಲೂ ಮನಸ್ಸನ್ನು ತಂಪುಗೊಳಿಸಬಲ್ಲದು.

ವಿಶ್ವದ ಅತಿ ಎತ್ತರದ ಗಾಜಿನ ಕಟ್ಟಡ ಎಂದೇ ಖ್ಯಾತಿಯಾಗಿರುವ ಅಲುಲಾದಲ್ಲಿನ 'ಮರಾಯಾ' (ಕನ್ನಡಿ ಅಥವಾ ಪ್ರತಿಬಿಂಬ) ಅರಬ್ಬರ ಕಲಾಪ್ರೀತಿಗೆ ಹಿಡಿದ ಕನ್ನಡಿಯಂತಿದೆ. ಸಂಗೀತ, ಸಂಸ್ಕೃತಿಯ ನೆಲೆಯದು. ಮರಳಿನಿಂದ ಮೇಲೆದ್ದು ನಿಂತಂತೆ ಕಾಣುವ ಈ ಕಟ್ಟಡ ಆಶರ್ ಎಂಬ ಮರುಭೂಮಿಯ ಕಣಿವೆಯಲ್ಲಿ ನಿರ್ಮಿತವಾಗಿದೆ.

ಸದ್ಯ ಜಗತ್ತಿನ ಅತಿ ಎತ್ತರದ ಕಟ್ಟಡ, ದುಬೈನ 'ಬುರ್ಜ್ ಖಲೀಫಾ'ಗಿಂತ ಎತ್ತರದ ಕಟ್ಟಡ ಕಟ್ಟುವ 'ಜೆಡಾ ಟವರ್' ಪ್ರಾಜೆಕ್ಟ್ ಕೂಡ ನಿರ್ಮಾಣ ಹಂತದಲ್ಲಿದೆ. ಇವಿಷ್ಟೂ, ಸ್ಥಳಗಳು ಹೇಳುವ ಕಥೆಯಾದರೆ, ಅಲ್ಲಿನವರ ಜನಜೀವನ, ಅಭಿವೃದ್ಧಿಯ ಕಥೆಯೊಂದನ್ನು ತೆರೆದಿಡುತ್ತದೆ.



ರಾತ್ರಿಯಲ್ಲಿ ಕಂಡ ದಿರಿಯಾ ವೈಭವ



ಪುರಾತನ ನಗರ 'ಅಲುಲಾ' ಪಕ್ಷಿನೋಟ

## ಮರಳುಗಾಡಿನಲ್ಲಿ ನಿರಂತರ ಅಭಿವೃದ್ಧಿ

ಜಗತ್ತಿನಲ್ಲಿ ಮನುಷ್ಯನ ಮೂಲಭೂತ ಸೌಕರ್ಯಗಳು ಎಂದು ಪರಿಗಣಿಸುವ ಯಾವುದೇ ಸಂಗತಿಗೆ ಕೊರತೆಯಾಗದಂತೆ, ಅಗತ್ಯಕ್ಕಿಂತ ಹೆಚ್ಚೇ ತನ್ನ ಜನಕ್ಕೆ ಕೊಡಬೇಕು ಎಂಬುದು ಅಲ್ಲಿನ ಆಡಳಿತದ ಸಂಕಲ್ಪ ಹೆಜ್ಜೆ ಹೆಜ್ಜೆಗೂ ಕಾಣಿಸುತ್ತದೆ. ಪ್ರಪಂಚದಲ್ಲಿ ಯಾವುದಕ್ಕೆ ಯಾವ ಯಾವ ಸ್ಥಳಗಳು ಪ್ರಸಿದ್ಧ ಎಂಬುದನ್ನು ಅರಿತು, ತಮ್ಮೂರಲ್ಲೂ ಅವುಗಳನ್ನು ನಿರ್ಮಿಸುವ ಪ್ರಯತ್ನಗಳು ಅಲ್ಲಲ್ಲಿ ನಡೆಯುತ್ತಲೇ ಇವೆ.

ಡಿಸ್ನಿ ವರ್ಲ್ಡ್‌ಗಿಂತ ದೊಡ್ಡ ಮನರಂಜನಾ ಪಾರ್ಕ್, ಮರಳುಗಾಡಿನಲ್ಲಿ ಹಿಮ ಸುರಿವ ಪರಿಕಲ್ಪನೆಯ 'ಸ್ನೋ ಥೀಮ್ ಸೆಂಟರ್' ಕೂಡ ಅವರ ಯೋಜನೆಯಲ್ಲಿ ಒಂದು. 'ರೆಡ್ ಸೀ ಯೋಜನೆ' ಅವರ ಮಹತ್ವಾಕಾಂಕ್ಷೆಗೆ ಸಾಕ್ಷಿ.

ನಿಯಂತ್ರಣಕ್ಕೆ ಸಿಗದಿರುವ ಟ್ರಾಫಿಕ್ ಸಮಸ್ಯೆಗೂ ಬುದ್ಧಿವಂತಿಕೆಯಿಂದ ಯೋಜನೆ ರೂಪಿಸಿದ್ದು, ಅದಕ್ಕೆ 'ದಿ ಲೈನ್' ಎಂಬ ಪರಿಕಲ್ಪನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಯೋಜನೆ ಇನ್ನೂ ಅಭಿವೃದ್ಧಿ ಹಂತದಲ್ಲಿದ್ದು, ಅದು ಸಾಕಾರಗೊಂಡರೆ ಇಡೀ ಜಗತ್ತಿಗೇ ಒಂದು ಉತ್ತಮ ಮಾದರಿಯನ್ನು ಕಟ್ಟಿಕೊಟ್ಟಂತಾಗುತ್ತದೆ. ಸುಲಭ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ತಂತ್ರ ಬಳಸಿ ಅಪಾರ್ಟ್‌ಮೆಂಟ್‌ಗಳ ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ. ಐದು ಕಿ.ಮೀ. ವ್ಯಾಪ್ತಿಯಲ್ಲಿ ಕಟ್ಟಬಹುದಾದ ಕಟ್ಟಡವನ್ನು ಒಂದೇ ಕಿ.ಮೀ. ವ್ಯಾಪ್ತಿಯಲ್ಲಿ ನಿರ್ಮಿಸಿ ಸಕಲ ಸೌಲಭ್ಯವನ್ನೂ ನೀಡುವುದು ಯೋಜನೆಯ ಜೀವಾಳ.

ಮರಳುಗಾಡಿನಿಂದ ಆವೃತವಾಗಿರುವ ಜಾಗ ಸೌದಿ. ಅಂಥ ಮರಳು ಜಾಗದಲ್ಲಿ ಎಷ್ಟೊಂದು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ ಎಂದು ಅನಿಸುವುದು ಅಲ್ಲಿನ ನೀರಿನ ವ್ಯವಸ್ಥೆ ಕಂಡಾಗ. ಭಾರತದಲ್ಲಿ ನೀರಿಗೆ ಹೊಳೆ, ನದಿ, ಬಾವಿಯಂಥ ಜಲಮೂಲಗಳೆಲ್ಲವೂ ಸಾಕಷ್ಟಿವೆ. ಆದರೂ ನಾವು ನೀರಿಗೆ ಒದ್ದಾಡುತ್ತೇವೆ. ಆದರೆ ಸೌದಿಯಲ್ಲಿರುವುದು ಉಪ್ಪು ನೀರಿನ ಸಮುದ್ರ ಮಾತ್ರ. ಅಂಥ ಜಾಗದಲ್ಲಿ ನೀರಿನ ಕೊರತೆಯಿಲ್ಲ ಎಂದರೆ ನಂಬಬಹುದೇ?. ಅಷ್ಟು ಅದ್ಭುತ ತಾಂತ್ರಿಕತೆಯ ಮಟ್ಟವನ್ನು ಅವರು ಸಾಧಿಸಿದ್ದಾರೆ. ಸಮುದ್ರದ ನೀರನ್ನು ದಿನಬಳಕೆಗೆ ಒಗ್ಗಿಸಿಕೊಂಡು, ಪ್ರತಿಯೊಬ್ಬರಿಗೂ ನೀರು ಉಚಿತವಾಗಿ ಲಭಿಸುವಂತೆ ಮಾಡಿದ್ದಾರೆ.

ಸೌದಿ ಸಿಕ್ಕಾಪಟ್ಟೆ ದುಡ್ಡಿರುವ ಶ್ರೀಮಂತ ರಾಷ್ಟ್ರ. ಹೀಗಾಗಿ ಅಭಿವೃದ್ಧಿ ಅಲ್ಲಿ ಸರಾಗ.